


ಗುಂಡ: ಡಾಕ್ಟ್ರೆ, ಹೊಟ್ಟೆ ಉರಿ ಹೆರಿಡಿಟಿನಾ?

ಡಾಕ್ಟರ್: ಇಲ್ಲ.

ಗುಂಡ: ಅಜೀರ್ಣ?

ಡಾಕ್ಟರ್: ಇಲ್ಲ

ಗುಂಡ: ತಿಕ್ಕಲುತನ?

ಡಾಕ್ಟರ್: ಇರಬಹುದು ಅಂತ ಅನ್ನಿಸ್ತಾ ಇದೆ.

ಗುಂಡ: ಯಾಕೆ ಹಾಗೆ ಅನ್ನಿಸ್ತಾ ಇದೆ?

ಡಾಕ್ಟರ್: ನಿಮ್ಮ ಮಗನೂ ಮೊನ್ನೆ ಇದೇ ಪ್ರಶ್ನೆ ಕೇಳಿದ್ದ!

★★★

ಗುಂಡನ ಮಗಳ ರಿಸೆಪ್ಷನ್‌ಗೆ ಎಲ್ಲ ಸಿದ್ಧವಾಗಿತ್ತು. ವಧೂವರರು ಕೈಯಲ್ಲಿ ಹಾರ ಹಿಡಿದು ನಿಂತಿದ್ದರು.

ಗುಂಡ: ಸ್ವಲ್ಪ ಇರಿ, ಇನ್ನೇನು ಬಂದು ಬಿಡ್ತಾರೆ, ಹೊರಟಿದ್ದಾರಂತೆ.

ವೀಡಿಯೋದವರು: ಯಾರು ಸರ್, ಎಲ್ಲಿಂದ ಹೊರಟಿದ್ದಾರೆ?

ಗುಂಡ: ನನ್ನ ಹೆಂಡ್ತಿ, ಬ್ಯೂಟಿಪಾರ್ಲರಿಂದ!

★★★

ತಿಮ್ಮ: ಕೈ ಕಾಲು ಮುರಿದುಕೊಂಡು ಆಸ್ಪತ್ರೆ ಸೇರಿದ್ನಲ್ಲ ಗುಂಡ, ಇನ್ನೊಂದು ತಿಂಗಳಲ್ಲಿ ಓಡಾಡ್ತಾನೆ. ಯೋಚಿಸ್ಬೇಡಿ ಅಂದಿದ್ರು ಜೋತಿಷಿಗಳು.

ಕಿಟ್ಟ: ಈಗೇನು ಉಲ್ಟಾ ಆಯ್ತಾ?

ತಿಮ್ಮ: ಇಲ್ಲ, ಇಲ್ಲ. ಹಾಗೇ ಆಯ್ತು. ಜೋತಿಷಿ ಮತ್ತು ಆಸ್ಪತ್ರೆ ಬಿಲ್ಲು ಕಟ್ಟಲು ಕಾರು ಮಾರಿದನಂತೆ. ಈಗ ಓಡಾಡ್ತಾ ಇದ್ದಾನೆ!

–ಹಾಡ್ಯ ಬ.ಜಯಾನಂದ



ಸಿಂಗ: ಏನಯ್ಯಾ ಯಾವಾಗ ನೋಡ್ಲಿ ನಿಮ್ಮ ಮನೆ ಬಂಧುಗಳಿಂದ ಕೂಡಿ ಕಲಕಲ ಅಂತಿತ್ತು. ಈ ಮಧ್ಯ ಒಬ್ಬರೂ ಬರುತ್ತಿಲ್ಲ. ಯಾಕೆ...?

ಪುಂಡ: ಏನೂ ಇಲ್ಲಯ್ಯ. ಮನೆ ಮುಂದೆ ಒಂದು ಬೋರ್ಡ್ ತಗಲಿ ಹಾಕಿದೆ ಅಷ್ಟೇ ಯಾರೂ ಬರುತ್ತಿಲ್ಲ!

ಸಿಂಗ: 'ನಾಯಿ ಇದೆ ಎಚ್ಚರಿಕೆ' ಬೋರ್ಡಾ?

ಪುಂಡ: ಅಲ್ಲ 'ನಾಯಿಗಳಿಗೆ ಸ್ವಾಗತ' ಅಂತ!

–ಜಿ.ವಿ. ಪ್ರಭು



ಗಂಡ: (ಹೆಂಡತಿಗೆ) ನಿನಗೇನು ತಲೆ ಕೆಟ್ಟಿದೆಯೇ? ಊಟದ ತಟ್ಟೆಯಲ್ಲಿ ಒಂದು, ಎರಡು ರೂಪಾಯಿ ನಾಣ್ಯಗಳನ್ನು ಹಾಕಿದ್ದೀಯಲ್ಲಾ?

ಹೆಂಡತಿ: ನೀವೇ ತಾನೇ ನಿನ್ನೆ, ಊಟದಲ್ಲಿ ಸ್ವಲ್ಪ 'ಚೇಂಜ್' ಇರಲಿ ಅಂತ ಹೇಳಿದ್ದು..!

★★★

ಅಪ್ಪ ಆಫೀಸಿನಲ್ಲಿದ್ದ. ಮಗಳ ಮೊಬೈಲ್‌ನಿಂದ ಮೆಸೇಜ್ ಬಂದಿತ್ತು.

'ನಾನು ತುಂಬಾ ಒಳ್ಳೆ ಹುಡುಗನ ಜೊತೆ ಓಡಿ ಹೋಗುತ್ತಿದ್ದೇನೆ. ನೀವು ನನ್ನ ಹಿಂದೆ ಬರಬೇಡಿ.'

ಅಪ್ಪ ರಿಪ್ಲೈ ಕಳಿಸಿದ: 'ತುಂಬಾ ಸಂತೋಷ ಮಗಳೇ, ಮದುವೆ ಖರ್ಚು ಉಳಿಸಿದೆ.'

ಮಗಳು ಪುನಃ ಮೆಸೇಜ್ ಮಾಡಿದ್ಲು: 'ಅಷ್ಟೊಂದು ಸಂತೋಷ ಬೇಡ. ಇದು ನಿನಗೆ ಅಮ್ಮ ಕಳಿಸಿದ ಮೆಸೇಜ್.'

## ವ್ಯತ್ಯಾಸ

ರಾಮು: ಡಿಮಾಂಡ್ ಡ್ರಾಫ್ಟ್ ಮತ್ತು ಚೆಕ್‌ಗಿರುವ ವ್ಯತ್ಯಾಸವೇನು?

ಗೋಪಿ: ಡಿ.ಡಿ. ಪತ್ನಿಯ ಹಾಗೆ; ವಿಶ್ವಾಸ ಇರಿಸಬಹುದು. ಚೆಕ್ ಗರ್ಲ್ ಫ್ರೆಂಡ್ ತರಹ. ಯಾವುದೇ ಸಮಯ ಬೌನ್ಸ್ ಆಗಬಹುದು!

## ಅಸಹಾಯಕತೆ

ಪ್ರಯಾಣಿಕರಿಂದ ತುಂಬಿಹೋದ ಬಸ್ಸಿನಲ್ಲಿ...

ರಾಮು: ನೀನೇಕೆ ನಿನ್ನ ಕಣ್ಣುಗಳನ್ನು ಮುಚ್ಚಿಕೊಂಡಿರುವೆ, ಸೌಖ್ಯವಿಲ್ಲವೆ?

ಗೋಪಿ: ಹಾಗೇನಿಲ್ಲ, ಆದರೆ ಆ ಹಣ್ಣು ಹಣ್ಣು ಮುದುಕಿ ನಿಂತು ಪ್ರಯಾಣಿಸುವುದನ್ನು ನಾನು ನೋಡಲಾರೆ!

## ಸಾಧ್ಯತೆ?

ಗೋಪಿ: ಶಸ್ತ್ರಚಿಕಿತ್ಸೆಯ ನಂತರ ನಾನು ಪಿಯಾನೊ ನುಡಿಸಬಲ್ಲೆನೆ?

ವೈದ್ಯರು: ಓಹೋ, ಧಾರಾಳವಾಗಿ.

ಗೋಪಿ: ಸಾರ್ಥಕವಾಯಿತು, ಮೊದಲು ನನಗೆ ಪಿಯಾನೊ ಬಾರಿಸಲು ಬರುತ್ತಿರಲಿಲ್ಲ...!

## ಉತ್ತರ

ರಾಮು: ನನ್ನ ಜೇಬಿನಲ್ಲಿ ಎಷ್ಟು ನಾಣ್ಯಗಳಿವೆ ಎಂದು ಊಹಿಸಿ ಹೇಳಬಲ್ಲೆಯಾ?

ಗೋಪಿ: ಸರಿಯಾಗಿ ಹೇಳಿದರೆ ಅವುಗಳಲ್ಲಿ ಒಂದು ನಾಣ್ಯ ನನಗೆ ನೀಡುವೆಯಾ?

ರಾಮು: ಒಂದೇಕೆ, ನೀನು ಸರಿಯಾಗಿ ಊಹಿಸಿದರೆ ಅವೆರಡನ್ನೂ ನಿನಗೇ ನೀಡಿಬಿಡುವೆ..!

## ಚಿಕಿತ್ಸೆ

ಗುಂಡ: ಪ್ರತಿ ಬಾರಿ ಚಹಾ ಕುಡಿಯುವಾಗ ನನ್ನ ಒಂದು ಕಣ್ಣು ನೋಯುತ್ತದೆ.

ಡಾಕ್ಟರ್: ಹಾಗಾದರೆ ಪ್ರತಿ ಬಾರಿ ಚಹಾ ಸೇವಿಸುವಾಗ ಲೋಟದೊಳಗಿಂದ ಚಮಚವನ್ನು ಹೊರಗೆ ತೆಗೆದಿಡಬೇಕು!

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ